ಸ್ರ 1890ನೇ ಇಸವಿ ಮಿಸಲೇನಿಯಸ್ ಪಿ॥ ನಂಬರ್ 20.

ಅರ್ಜೀದಾರ್ರು, ಮದನೆಪಲ್ಲಿ ಸೀತಾರಾಮಪ್ಪ ವಗ್ಗೈರೇರು.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ, ಚಿಂತಾಮಣಿ ಕಲ್ಯಾಣಿ ತರಂಗಿಣಿನಿಧಿ ಕಂಪೆನಿಗೆ ಸಂಮಂಧಪಟ್ಟ ಷೇರುದಾರ್ರುಗಳು ಕೆಲವು ಮೆಂಬರುಗಳು ಸಕಾಲದಲ್ಲಿ ಕಾಲಸ್‌ಗಳು ಕೊಡದೆಹೋದ ನಿಮಿತ್ತ ಕಂಪೆನಿ ಕೆಲಸಗಳು ನಿಂತುಹೋಗಿರು ತ್ತೆಂತಲೂ ಕೆಲವು ಮೆಂಬರುಗಳು ದಾವಾ ದಾಖಲ್ಮಾಡಿ ಡಿಕ್ರಿಗಳನ್ನ ಪಡದು ತಮ್ಮಗಳ ಮೊಬಲಗುಗಳನ್ನ ವಿಲೇವಾಡಿಕೊಳ್ಳುವದರಲ್ಲಿ ಉದ್ಯುಕ್ತರಾಗಿರುತ್ತಾರಂತಲೂ ಹೀಗೆ ನಡಿಸುವದರಲ್ಲಿ ಇತರ ಷೇರುದಾರ್ರುಗಳಿಗೆ ನಷ್ಟ ಸಂಭವಿಸುವದರಿಂದ ಕಂಪನಿ ವೈಂಡಪ್ ಮಾಡಿಸಿ ಲಿಕ್ವಿಡೇಟರನ್ನ ಮೊಕರರ್ರ್ಮಾಡಿಸಿ ಯಿರತಕ್ಕ ಹಣವನ್ನ ಷೇರ್ರುದಾರುಗಳಿಗೆಲ್ಲಾ ಹಂಚಿಕೆಮಾಡಿಸಬೇಕೆಂದು ವಗ್ಗೈರೆ ಅರ್ಜೀ ಕೊಟ್ಟಿರುವದ ರಿಂದ ಈ ಬಗ್ಯೆ ಸ್ರ 1890ನೇ ಇಸವಿ ಫಿಬ್ರವರೀ ತಿಂಗಳು 4ನೇ ತಾರೀಖು ಮಂಗಳವಾರ ಹಿಯರಿಂಗ್ ಮೊಕರರ್ರ್ಮಾಡಿಸಿ ಇಧೆ. ಆ ತಾರೀಖು ದಿವಿ 11 ಘಂಟೆಗೆ ಈ ಕೋರ್ಟು ರೂಬರೂ ಆಕ್ಷೇಪಣೆ ಯಿರತಕ್ಕ ವರೆಲ್ಲರೂ ಅವರೇ ಆಗಲಿ ಅವರ ಕಡೆ ಅಡ್ವೊಕೇಟರಾಗಲಿ ಹಾಜರಾಗಿ ಅವರವರ ಆಕ್ಷೇಪಣೆಗಳನ್ನು ತಿಳಿಯಪಡಿಸ ಬಹುದು.

ತಾರೀಖು 23ನೇ ಮಾಹೆ ಜನವರಿ ಸ್ರ 1890ನೇ ಇಸವಿ.

ಹುಕುಂ-ಇಮ್ಮೋಜೇಬ್,
ಎಸ್. ಆರ್. ಸುಬ್ಬರಾಯರ್,
ರಿಜಿಸ್ಟ್ರಾರ್.

ಫೈನ್ಯಾನ್ಷಿಯಲ್ ಇಲಾಖೆ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಯೆ, ಪರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಯೆ ಅವ ರುಗಳೊಡನೆ ಮೈಸೂರು ಗವರ್ಮೆಂಟಿನವರ ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳ ತಮ್ಮ ಡಿಬೆಂಚರ್‌ಗಳನ್ನು ಎಕ್ಷೇನ್ಸ್‌ಮೆಂಟ್ ಯಾನೇ ಪರಾ ಬಗ್ಯೆ ಇದರಡಿ ರುಜು ಮಾಡಿಸುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿವಾಂಡ್ ವಾರಂಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಕ್ಷೇನ್ಸ್‌ಮೆಂಟ್ ಬಗ್ಯೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡಿರ್ಸ್,
ಕಾಂಪ್ಟ್ರೋಲರ್.

ಫಾರೆಸ್ಟ್ ಇಲಾಖೆ.

ತಾರೀಖು 21ನೇ ಜನವರೀ ಸ್ರ 1890.

ಇದರಿಂದ ತಿಳಿಯಪಡಿಸುವದೇನಂದರೆ, ಜನಗಳ ಅನುಕೂಲಕ್ಕೋಸ್ಕರ ರೈಲ್ವೇ ಸ್ಟೇಷ್ ಇರುವ ಬೀರೂರಿನಲ್ಲಿ ಬಂದು ನಾಟಾಗಳ ಡಿಪೋ ಸ್ಥಾಪಿಸಲ್ಪಟ್ಟು ಇಧೆ. ಅಲ್ಲಿ ನಾನಾ ತರಹಗಳ ನಾಟಾ ಮತ್ತು ಬೊಂಬುಗಳು ಚಿಲ್ಲರೆ ದರಕ್ಕೆ ಮಾರಲ್ಪಡುವದು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸೆಷನ್ ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಅರ್ಜೀ ನಂಬರ್ 1027.

ಬೆಂಗಳೂರು ರಾಕಾಂತಿಗಿನ ಪ್ಯಾಟೆಯಲ್ಲಿದ್ದು ಮೃತಪಟ್ಟ ಸಖಿಮಾನ ಆಸ್ತೀ ವಿಷಯದಲ್ಲಿ—

ಸದರೀ ದರಖಾಸ್ತುದಾರಳಾದ ಹಾಜಿ ಸಖೀನಾಬಿಯ ಅರ್ಜಿಯನ್ನು 1890ನೇ ಇಸವಿ ಜನವರಿ ತಿಂಗಳು ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಖೀಮಾನ ಆಸ್ತಿಗೆ ಹಕ್ಕು ದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1889ನೇ ಇಸವಿ ಅರ್ಜೀ ನಂಬರ್ 1049.

ಕಿರಾ ತಾಲ್ಲೂಕು ಕಳಂಚಳಿ ಸಮ್ಮತು ಚಿಕ್ಕನ ಹಳ್ಳಿ ಮಜರೆ ಚಿಕ್ಕದಾಸರಹಳ್ಳೀಲಿದ್ದು ಮೃತಪಟ್ಟ ತಿಪ್ಪಂಣನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಕರಿಯಪ್ಪ ಮೃತಪಟ್ಟ ಸದರೀ ತಿಪ್ಪಂಣನಿಗೆ ಸಹೋದರನು ಆಗಬೇಕೆಂಬ ಹಕ್ಕುದಾರೀ ಮೇಲೆ ಸದರೀ ಚಿಕ್ಕದಾಸನ ಹಳ್ಳ ಸ್ಥಳದ ಕರಿಯಪ್ಪನು ಸದರೀ ಚಿಕ್ಕದಾಸರಹಳ್ಳಿ ವಾಸಸ್ಥನಾಗಿ ಮೃತಪಟ್ಟ ತಿಪ್ಪಂಣನ ಜೊಂದಗಿ ಬಗ್ಯಾಗಿ ಬರತಕ್ಕ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟಿಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಕರಿಯಪ್ಪನ ಅರ್ಜಿಯನ್ನು 1890ನೇ ಇಸವಿ ಫಿಬ್ರವರಿ ತಿಂಗಳು ತಾರೀಖು 7ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಪ್ಪಂಣನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಜನವರೀ ತಿಂಗಳು 11ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ,

---

ದಿವಾಳಿಯಾದ ಡಿಕ್ರೀ ದೇಣೇದಾರ ಮದ್ದಗಿರಿ ತಾಲ್ಲೂಕು ಪುರವಾರದ ಸಮ್ಮತು ಕಾಯಂಗುತ್ತಾ ನರಸಾಪುರದಲ್ಲಿರತಕ್ಕ ಅಂಬಾಜಿರಾವ್ ವಿಷಯದಲ್ಲಿ—

ಸ್ಯ 1889ನೇ ಇಸವಿ ದಿವಾಳಿ ಕೇಸ್ ನಂಬರ್ 884.

ಹುಕುಂ.

ಮೇಲ್ಕಂಡ ಅಂಬಾಜಿರಾವ್ ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜೀರಾದ ವೆ|| ಯಲ್. ಅನಂತಸ್ವಾಮಿರಾಯರ ರೂಬರೂ ಅರ್ಜೀದಾರರಾದ ಅಂಬಾಜಿರಾವ್ ಪರವಾಗಿ ಅಡ್ವೊಕೇಟ್ ವೆ|| ನರಸಿಪ್ಪಯ್ಯಂಗಾರ್ರನ್ನು ಮತ್ತು ಸದರೀಯವನ ಲೇಣೇದಾರ್ರಾದವರು ಯಾರು ಹಾಜರಾಗಲಿಲ್ಲ ಅರ್ಜಿದಾರನ್ನ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—ಯಾರನ್ನೂ ಹಾಜರಾಗಲಿಲ್ಲ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಅಂಬಾಜಿರಾವ್ ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ಪರವಾಗಿಯಾಗಲಿ ವಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1889ನೇ ಇಸವಿ ಡಿಸಂಬರ್ 13ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತಿನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್ರ ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಲಿಲಗಳು.	ಯಾವಾಗ ಬಿಲ್ಲಿಗೆ ಹುಟ್ಟಿದವು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಟಿಪ್ಪಣಿ.
1	ಮದ್ದಗಿರಿ ಅಲ್ಲೀಸಾಬಿ ..	87 7 1	..	ಡಿಕ್ರೀ ಬಾಬತು	
		20 0 0	..	ಪತ್ರದ ಬಾಬತು	
2	ವೈಶ್ಯರ ತಾತಪ್ಪ ಮದ್ದಗಿರಿ ..	50 0 0	..	ಭೋಗ್ಯ ಪತ್ರದ ಬಾಬತು	
		14 0 0	..	ಪತ್ರದ ಬಾಬತು	
3	ಮದ್ದಗಿರಿ ತಾಲ್ಲೂಕು ಗೊಂದಿಹಳ್ಳಿ ವೆಂಕಟರಾಮಯ್ಯ	30 0 0	..	ಪತ್ರದ ಬಾಬತು	
	ಜುಮ್ಲಾ	201 7 1			

ದಿವಾಳಿಯಾದ ಡಿಕ್ರೀ ದೇಣೇದಾರ ಕೋಲಾರ ಡಿಸ್ಟ್ರಿಕ್ಟು ಬಾಗೇಪಲ್ಲಿ ತಾಲ್ಲೂಕು ಸಡ್ಲೆ ವಾರಹಳ್ಳಿ ಗ್ರಾಮದಲ್ಲಿರತಕ್ಕ ಪಾಪಿರಡ್ಡಿ ಮಗ ಪಿಲ್ಲಂಣನ ವಿಷಯದಲ್ಲಿ—

ಸ್ 1888ನೇ ಇಸವಿ ದಿವಾಳಿ ಕೇಸ್ ನಂಬರ್ 1118.

1889ನೇ ಇಸವಿ ಮಿಸಲೇನಿಯಸ್ 125.

ಹುಕುಂ.

ಮೇಲ್ಕಂಡ ಪಿಲ್ಲಂಣನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಸಬ್ ಜಡ್ಜೀಯವರಾದ ಮೆ|| ಯಲ್. ಅನಂತಸ್ವಾಮಿರಾಯರ ರೂಬರೂ ಅರ್ಜೀದಾರರಾದ ಪಿಲ್ಲಂಣನು ಖುದ್ದು ಆಗಿಯು ಮತ್ತು ಸದರೀಯವನ ಲೇಣೇದಾರ್‌ರಾದ 1ನೇ ಗೊಲ್ಲ ನರಸಂಣ ತರಫ಼ಿ ಅಡ್ವೋಕೇಟ್ ಮೆ|| ಕೆ. ಟಿ. ನರಸುಹ್ಮಣ್ಯಂಗಾರ್‌ರವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‌ರು ತಮಗೆ ಈ ದರ್ಯಾಫ್ತ್‌ಗೆ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು ಯಾರಂದರೆ, 2— 3ನೇರು ಹಾಜರಾಗಲಿಲ್ಲ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಪಿಲ್ಲಂಣನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಉಸ್ತರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧ ಪಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ 1889ನೇ ಇಸವಿ ಡಿಸಂಬರ್ 21ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನಿಗೆ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ್‌ರ ಅಥವಾ ದಾವಾದಾರ್‌ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.			ಯಾವಾಗ ದೇಣೆ ವುಂಟಾದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇನಾದರೂ ಇದ್ದರೆ.	ಟಿ. ಗ
1	ತಿಡ್ಲಘಟ್ಟದ ತಾಲ್ಲೂಕು ವೆಂಕಟಾಪುರದ ಸೊಳ್ಳೆ ನರಸಂಣ ..	156	12	7	1887	ಚಿಕ್ಕಬಳ್ಳಾಪುರ ಮು|| ಕೋರ್ಟ್ 1887ನೇ ಅ|| 113ನೇ ನಂಬರ್ ಡಿಕ್ರೀ ಬಾಬತು .	
2	ಹಿಂದೂಪುರದ ತಾಲ್ಲೂಕು ಕೊರಿಕೊಂಡೆ ಕೊಟ್ಟ್ಯ ಗುಳು ನಂಜಪ್ಪ ..	135	4	11	..	ಡಿಕ್ರೀ ಬಾಬತು	
3	ಡಿಟೋ ಕೊರೀಕೊಂಡೆ ತಾಲ್ಲೂಕು ಅಂಣಾ ನಾರಣಪ್ಪ ..	11	9	0	..	ತಪಸೀಲ್ ಯಿಲ್ಲಾ	
	ಜುಮ್ಲಾ	321	10	6			

ಎಲ್. ಅನಂತಸ್ವಾಮಿರಾವ್,
ಸಬ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟು:
ಮೈಸೂರು ಡಿಸ್ಟ್ರಿಕ್ಟು ಜಡ್ಜೀಯವರ ಕೋರ್ಟ್‌ನಲ್ಲಿ.
1889ನೇ ಇಸವಿ ಅರ್ಜೀ ನಂಬರ್ 329.

ಮೃತಪಟ್ಟ ವಾಯಲ್‌ಪಾಡು ವೆಂಕೋಬರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್‌ರು ಕ್ರಿಷ್ಣರಾಯ ಮೈನರ್ ಗಾರ್ಡಿಯರ್ ತಾಯಿ ಜೀವೂಬಾಯಿ ಮೃತಪಟ್ಟ ಸದರಿ ವೆಂಕೊಬರಾಯರಿಗೆ ಮಗ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಹಳೇ ಅಗ್ರಹಾರ ಸ್ಥಳದ ಸದರೀ ಜೀವೂಬಾಯಿರು ಸದರಿ ವಾಸಸ್ಥರಾಗಿ ಮೃತಪಟ್ಟ ವೆಂಕೋಬರಾಯರ ಜಿಂದಗಿ ಬಗ್ಯಾಗಿ ಬರತಕ್ಕ 700 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಅಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಜೀವೂಬಾಯಿರ ಅರ್ಜಿಯನ್ನು 1890ನೇ ಇಸವಿ ಫಿಬ್ರವರಿ ತಿಂಗಳು ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕೋಬರಾಯರ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ಜನವರಿ ತಿಂಗಳು 20ನೇ ತಾರೀಖಿನಲ್ಲಿ ಕೋರ್ಟ್ ಮೊಹರ್‌ನಿಗೆ ನಮ್ಮ ದಸ್ತಖತ್ತೊಡನೆ ಕೊಡೋಣ್ಣಾಗಿದೆ.

ಎಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ್.

ನಂ. 4. ತಾರೀಖು 27ನೇ ಡಿಸೆಂಬರ್ 1889.

ಮೈಸೂರು ಡಿಸ್ಟ್ರಿಕ್ಟ್ ಇದರಲ್ಲಿ ನಮೂದಾಗುವ ಸಬ್ ರೆಜಿಸ್ಟ್ರಾರ್ ಆಫಿಸಿನಲ್ಲಿ ಈ ಕೆಳಗೆ ನಮೂದಿಸಿರುವ ಜೀವಾರ್ಸ್ ದಸ್ತಾವೇಜನ್ನು ಕ್ರಮಪ್ರಕಾರ ವಾರಸ್‌ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುತುಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳ ಒಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರಿಜಿಸ್ಟ್ರೇಷ್ಟ್ ಆಕ್ಟು 25ನೇ ಸೆಕ್ಷನ್ ಪ್ರಕಾರ ನಾಶ ಪಡಿಸಲ್ಪಡುತ್ತೆ.

ಸಬ್ ರಿಜಿಸ್ಟ್ರಾರ್ ಆಫಿಸ್ ಹೆಸರು.	ಇಸವಿನಂಬರ್.	ಬರದುಕೊಟ್ಟವನ ಹೆಸರು ಮತ್ತು ಅಡಿಷ್ಟ್.	ಬರಸಿಕೊಂಡನನ ಹೆಸರು ಮತ್ತು ಅಡಿಷ್ಟ್.	ರಿಜಿಸ್ಟರಿಗೆ ತಾರೀಖು ಸಾಲ್ ಮಾಹೆ ತಾರೀಖು.	ರಿಜಿಸ್ಟ್ರಾದ ಸಾಲ್ ಮಾಹೆ ತಾರೀಖು.	ದಸ್ತಾವೇಜಿನ ಸ್ವಭಾವ.
ಹುಣಸೂರು ಸಬ್ ರಿಜಿಸ್ಟ್ರಾರ್ ಆಫಿಸ್	1ನೇ ಬುಕ್ಕು 90ನೇ ನಂಬರ್ 1887—88	ಹುಣಸೂರು ತಾಲ್ಲೂಕು ದೊಡ್ಡನೆರ್ಲೆ ಗ್ರಾಮದಲ್ಲಿ ಇರುವ ಬಲಜೈ ಜಾತಿ ಕುಳವಾಡಿ ಪುಟ್ಟನ ಮಗ ಕುಳ್ಳಾ ವೆರಫ್ ನರಸ	ಹುಣಸೂರು ತಾಲ್ಲೂಕು ದೊಡ್ಡನೆರ್ಲೆಗ್ರಾಮದ ಮುಸಲಮಾನರ ಜಾತಿ ಯಾಕೂಫ್‌ಸಾಬರಮಗ ಮೊಖ್ತುಂ ಸಾಬಿ	30—6—87	1—7—87	ಜಮೀನು ಸಂಬಂಧವಾದ (60) ರೂಪಾಯಿನ ಕುದ್ದ ಕ್ರಯಪತ್ರ
ಡಿಟೋ	1ನೇ ಬುಕ್ಕು 171ನೇ ನಂ. 1887—88	ಹುಣಸೂರು ತಾಲ್ಲೂಕು ಬೆಟ್ಟದಪುರದ ಕಸಬೆಯಲ್ಲಿರುವ ಬಸವಾಪಟ್ಟಣದ ಕಾಪತಿ ಭಟ್ಟರಮಗ ಕೃಷ್ಣ ಭಟ್ಟ	ಹುಣಸೂರು ತಾಲ್ಲೂಕು ಬೆಟ್ಟದಪುರದ ಕಸಬೇಲಿ ಇರುವ ಕಂಚಿಗಾರ ಮೂಡಲಗಿರಯ್ಯನ ಮಗ ಮೇಲಗಿರಯ್ಯ	22—7—87	5—9—87	ಮನೇ ದಳದ ಜಾಗ ಕ್ರಯಪತ್ರ ರೂಪಾಯಿ (50)
ಹೆಗ್ಗಡದೇವನ ಕೋಟೆ ಸಬ್ ರಿಜಿಸ್ಟ್ರಾ ಆಫಿಸ್	1ನೇ ಬುಕ್ಕು 34ನೇ ನಂಬರ್ 1887—88	ಮೈಸೂರು ಲಷ್ಕರ್ ಮಹಲೇಲಿರುವ ಆಂದ್ರಕ್ಷತ್ರಿಯ ಗೋಲಂದಾಸ ಸುಬ್ಬನಾಯಡರಮಗ ಗಾರೆಕೆಲಸದ ಪೆಸ್ತ್ರಿ ಕೃಷ್ಣಪ್ಪನಾಯಿಡು	ಮೈಸೂರು ಹೊಸಆಗ್ರಹಾರದಲ್ಲಿ ಇರುವ ವೈಷ್ಣವ ಬ್ರಾಹ್ಮಣ ಲಿಖಾವಟ್ಟು ಜೀವನದ ಧಾರವಾಡ ರಾಮರಾಯರ ಮಗ ಶಾಮರಾಯ ಇವರ ತಮ್ಮ ತ್ರಿನಿವಾಸರಾಯ	19—7—87	29—7—87	ಕೇತಹಳ್ಳಿ ಗ್ರಾಮದ ಸರ್ವೆ 7—8—9—10—13 ಮತ್ತು 14 ಈ 6 ಜಮೀನು ಪೈಕಿ 5 ಜಮೀನ್ ತರಿ ಲಾಯಕ್ ಆದದ್ದು ಇದಕ್ಕೆ ಸರ್ಕಾರದಿಂದ ಆಗಬೇಕಾದ ಕಾಂಗಾರಿ ಮಾಡಿಕೆ ನೀರು ಕೊಟ್ಟರೆ ಬರದುಕೊಟ್ಟವನಿಗೆ ಬರಸಿಕೊಂಡವನ 2 ಖಂಡಗ ಜಮೀನ್ ಕೊಡತಕ್ಕದ್ದು ಬರದುಕೊಟ್ಟವನು ಹಾತಲಾಗವಡಿನಿಂದ ಕಾಂಗಾರಿ ಮಾಡಿಕೆ ದರೆ ಅರ್ಧಜಮೀನ್ ಕೊಡತಕ್ಕದ್ದೆಂದು ವಗೈರೆ
ಯಡತೊರೆ ಸಬ್ ರಿಜಿಸ್ಟ್ರಾ ಆಫಿಸ್	1ನೇ ಬುಕ್ಕು 87—88ನೇ ಇಸವಿ 584ನೇ ನಂಬರ್	ಯಡತೊರೆ ತಾಲ್ಲೂಕು ಲಾಳನಹಳ್ಳಿಯಲ್ಲಿರುವ ವೀವಾಚಾರದಜಾತಿ ಕಿದ್ದಲಿಂಗೇಗೌಡನಮಗ ಕಿದ್ದಲಿಂಗೇಗವ್ಡ	ಯಡತೊರೆ ತಾಲ್ಲೂಕು ದ್ವಾರನಹಳ್ಳೀಯಲ್ಲಿ ಇರುವ ಕಿನ್ನರ ಜಾತಿ ಕಿರಿಯಾಪಟ್ಟದ ಅಂತಯ್ಯನಮಗ ಜಿರಾಯಿತು ಜೀವನದ ಅಂತಯ್ಯ ಉರಫ್ ಅಂತೊಣಯ್ಯ	24—10—87	25—10—87	(100) ರೂಪಾಯಿನ ಗದ್ದೆ ಕ್ರಯಪತ್ರ
ತಿರುಮಕೂಡು ನರಸೀಪುರ ಸಬ್ ರಿಜಿಸ್ಟ್ರಾ ಆಫಿಸ್	ತಿರಸ್ಕರಿಸಿದ್ದು ನಂಬರ್ 4 87— 88ನೇ ಇಸವಿ	ತಿರುಮಕೂಡು ನರಸೀಪುರ ತಾಲ್ಲೂಕು ಮುಡ್ಲವಾಡಿ ಗ್ರಾಮದ ದಾಖಲೆ ಕೆಬ್ಬೆಹುಂಡಿಲಿರುವ ಹೊನ್ನಯ್ಯನಮಗ ನಾರಣಪ್ಪ	ತಿರುಮಕೂಡು ನರಸೀಪುರ ತಾಲ್ಲೂಕು ಮುಡ್ಲವಾಡಿಗ್ರಾಮದದಾಖಲೆ ಕೆಬ್ಬೆಹುಂಡಿಯಲ್ಲಿರುವ ಹೊನ್ನಯ್ಯನ ಮಗ ಶಾ|| ಸುಬ್ಬರಾಯ	2—3—86	ತಿರಸ್ಕರಿಸಿದ ತಾರೀಖು 13—7—87	(100) ರೂಪಾಯಿನ ಜಮೀನ್ ಕ್ರಯಪತ್ರ
ಡಿಟೋ	ತಿರಸ್ಕರಿಸಿದ್ದು ನಂಬರ್ 3 87—88ನೇ ಇಸವಿ	ತಿರುಮಕೂಡು ನರಸೀಪುರ ತಾಲ್ಲೂಕು ಸರ್ವಮಾನ್ಯ ಕಾರಗಹಳ್ಳೀ ಗ್ರಾಮ ದಾಖಲೆ ಕೃಷ್ಣಪುರದಲ್ಲಿ ಇರುವ ಗುರುಗಳು ವರದಾಚಾರ್ಯರ ಮಗ ತಾತಾಚಾರ್ಯ ಸಂಮತಿ ರುಜಾ ಹಾಕಿರುವ ವೆಂಕಟವರದಾಚಾರಿ	ತಿರುಮಕೂಡು ನರಸೀಪುರ ತಾಲ್ಲೂಕುಮುಡ್ಲವಾಡಿ ಗ್ರಾಮ ದಾಖಲೆ ಕೆಬ್ಬೆಹುಂಡಿಲಿರುವ ಕುರಿ ನಂಜನ ಬಸವೇಗವ್ಡನ ಮಗಕುಳ್ಳ ನಂಜೇಗವ್ಡ, ಪರುವ ತೇಗವ್ಡನ ನಂಜೇಗವ್ಡನಮಗ ಬಸವೇಗವ್ಡ	14—4—86	ತಿರಸ್ಕರಿಸಿದ ತಾರೀಖು 13—7—87	(500) ರೂಪಾಯಿನ ಜಮೀನ್ ಕ್ರಯಪತ್ರ

ಸಬ್ ರಿಜಿಸ್ಟ್ರರ್ ಆಫಿಸ್ ಹೆಸರು.	ಇಸವಿ ನಂಬರ್.	ಬರದುಕೊಟ್ಟವನ ಹೆಸರು ಮತ್ತು ಅಡಿಪರ್ಷ.	ಬರಸಿಕೊಂಡವರ ಹೆಸರು ಮತ್ತು ಅಡಿಪರ್ಷ.	ರಿಜಿಸ್ಟ್ರಿಗೆ ಹಾಜರಾದ ಸಾಲ್ ಮಾಹೆ ತಾರೀಖು.	ರಿಜಿಸ್ಟ್ರಿಯಾದ ಸಾಲ್ ಮಾಹೆ ತಾರೀಖು.	ದಸ್ತಾವೇಜಿನ ಸ್ವಭಾವ.
ತಿರುಮಕುಡು ನರಸೀಪುರ ಸಬ್ ರಿಜಿಸ್ಟ್ರಾರ್ ಆಫಿಸ್	ತಿರಸ್ಕರಿಸಿದ್ದು ನಂಬರ್ 6 87—88ನೇ ಇಸವಿ	ಶ್ರೀರಂಗಪಟ್ಟಣ ತಾಲ್ಲೂಕು ಕಲ್ಲೂಣಿಯಲ್ಲಿರುವ ಬುರ್ಡಸಾಬಿ ಕಿರಿಮಗ ಅಹಮ್ಮದ್‌ಸಾಬಿ	ಶ್ರೀರಂಗಪಟ್ಟಣ ತಾಲ್ಲೂಕು ಕಲ್ಲೂಣಿಯಲ್ಲಿರುವ ಲಬ್ಬೆಮುಸಲಮಾನ ರಜಾತಿ ಮೊಳೆ ಹುಂಡಿ ಬುರ್ಡಸಾಬಿಮಗ ರೈಮ್ಮಾಸಾಬಿ	21—7—85	ತಿರಸ್ಕರಿಸಿದ ತಾರೀಖು 23—7—87	(100) ರೂಪಾಯಿನ ಜಮ್ಮಿ ಆಧಾರಪತ್ರ
ಡಿಟೋ	ಬುಕ್ಕು ನಂ.1 ನಂ. 1284 1886—87	ತಿರುಮಕೂಡ್ಲು ನರಸೀಪುರತಾಲ್ಲೂಕುಮೂಗೂರು ವಿಶ್ವೇಶ್ವರಯ್ಯನವರ ಹೆಂಡತಿ ವೆಂಕಮ್ಮ	ಕ್ಯೋಸ್ಪೇಟೆ ತಾಲ್ಲೂಕು ಚನ್ನಪಟ್ಟಣದಲ್ಲಿರುವ ಶಾಮಾಜೊಯಿಸರ ಮಗ ನರಸುಹ್ಮಶಾಸ್ತ್ರಿ	21—3—87	ರಿಜಿಸ್ಟ್ರಾದ್ದು 22—3—87	(300) ರೂಪಾಯಿನ ಜಮ್ಮಿ ಆಧಾರಪತ್ರ
ಡಿಟೋ	ಬುಕ್ಕು ನಂ.1 ನಂಬರ್ 213 1887—88	ತಿರುಮಕೂಡ್ಲು ನರಸೀಪುರ ತಾಲ್ಲೂಕು ಹಿಟ್ಟುವಳ್ಳಿಲಿ ಇರುವ ತಮ್ಮಾಭಟ್ಟರ ಮಗ ನರಸಿದೇವರ ಭಟ್ಟ	ತಿರುಮಕೂಡ್ಲು ನರಸೀಪುರ ತಾಲ್ಲೂಕು ಜೊಡೀ ಕುಪ್ಪೇಲಿರುವ ಪಟೆಲ ಕಪನಿಗವುಡನ ಮಗ ಪಟೇಲ ದೊಡ್ಡನಂಜೇಗವುಡ	18—5—87	21—5—87	(32) ರೂಪಾಯಿನ ಜಮ್ಮಿ ಕ್ರಯಪತ್ರ
ಡಿಟೋ	ಬುಕ್ಕು ನಂ.1 ನಂಬರ್ 261 1887—88	ತಿರುಮಕೂಡ್ಲು ನರಸೀಪುರ ತಾಲ್ಲೂಕು ಮುತ್ತವಾಡಿ ಗ್ರಾಮ ದಾಖಲೆ ಕೆಬ್ಬೆಹುಂಡಿಲಿರುವ ಹೊನ್ನಯ್ಯನಮಗ ಶಾ॥ ಸುಬ್ಬರಾಯ	ಬರದುಕೊಟ್ಟವನ ತಮ್ಮ ನಾರಣಪ್ಪ	26—5—87	30—5—87	(100) ರೂಪಾಯಿನ ಮನೆ ಕ್ರಯಪತ್ರ ಮತ್ತು ಈ ಕ್ರಯಕ್ಕೆ ಒಂದು ಜಮ್ಮಿ ಸಂಬಂಧಪಡುತ್ತೆ
ಡಿಟೋ	ಬುಕ್ಕು ನಂ 1 ನಂಬರ್ 262 1887—88	ತಿರುಮಕೂಡ್ಲು ನರಸೀಪುರ ತಾಲ್ಲೂಕು ಮುತ್ತವಾಡಿ ದಾಖಲೆ ಕೆಬ್ಬೆಹುಂಡಿಲಿರುವ ಹೊನ್ನಯ್ಯನ ಮಗ ನಾರಣಪ್ಪ	ಬರದುಕೊಟ್ಟವನ ಅಂಣ ಸುಬ್ಬಾಯ	26—5—87	30—5—87	(300) ರೂಪಾಯಿನ ಜಮ್ಮಿ ಕ್ರಯಪತ್ರ
ಮೈಸೂರುಸಬ್ ರಿಜಿಸ್ಟ್ರಾರ್ ಆಫಿಸ್	ಬುಕ್ಕು ನಂ.1 ನಂಬರ್ 593 86—87ನೇ ಇಸವಿ	ಮೈಸೂರು ದೇವರಾಜಮೊಹಲ್ಲೆಲಿರುವ ತೊಟದ ತಿಗಳರ ಜಾತಿ ಗರೀ ಕಟ್ಟಿಗೆ ಹನುಮೈನ ಮಗ ಕೆಂಪಾ, ಮೈಸೂರು ವೀರಣಗೆರೆಲಿಯಿರುವ ಸೈದ್‌ಬುರ್ಡ ಮಗ ಸೈದ್ ಉಸರ್ಮಾಸಾಬಿ ವರಫ ಅಮಿರ್ ಸಹ	ಮೈಸೂರು ಕಿಲ್ಲೆಯಲ್ಲಿರುವ ಆಯಿಯಂದರು ಲಿಂಗರಾಜೆ ಅರಸಿನವರ ಮಕ್ಕಳು ಚಿಕ್ಕಲಿಂಗರಾಜೇ ಅರಸುಗಳವರು	13—11—86	16—11—86	ಬೆಲ್ಲವತ್ತ ಗ್ರಾಮದ ತೋಟದ (5) ವರುಪದ ಗುತ್ತಿಗೆ ದಸ್ತೈವಜ್ಞ ಸಾಲ್ 1ಕ್ಕೆ (100) ರೂಪಾಯಿ ಕೊಡತಕ್ಕದ್ದು 1886ನೇ ಇಸವಿ ಜೂ॥ ತಾರೀಖು 18ರಲಾಗಾಯಿತು ಗುತ್ತಿಗೆ ಕೊಡುವದಾಗಿ
ಡಿಟೋ	ಬುಕ್ಕು ನಂ. 1 ನಬಂರ್ 668 86—87ನೇ ಇಸವಿ	ಮೈಸೂರು ಲಷ್ಕರ್ ಮಹಲೆದಲ್ಲಿ ಯಿರುವ ಪಾಚಾರದ ಜಾತಿಹೊನ್ನಪ್ಪನ ಮಗ ಅರಮನೆ ನೌಕರಿ ಕಸಬು ಗಂಗೈಯ; ಸದರೀ ಜಾತಿ ಸೀರಿನ ಮಾದಯ್ಯ	ಮೈಸೂರು ಟವ್ನ್ ಬ್ಯಾಂಕ್ ತರಫ ಯೇ ಜಂಟಿ ಕೆ. ಸುಬ್ಬರಾವ್	15—12—86	16—12—86	ಮೈಸೂರು ಲಷ್ಕರ್ ಮಹಲೆಲಿಯಿರುವ (6) ಅಂಕಣ ಹೆಂಚಿನ ಮನೆ ಆಧಾರ ಕಿಮ್ಮತ್ತು (125) ರೂಪಾಯಿ ತಿಂಗಳು 1ಕ್ಕೆ (12) ರೂಪಾಯಿ ಖಿಸ್ತು ಕೊಡುವದಾಗಿ
ಡಿಟೋ	ಬುಕ್ಕು ನಂ. 1 ನಂಬರ್ 805 86—87ನೇ ಇಸವಿ	ಮೈಸೂರು ಲಷ್ಕರ್ ಮಹಲೆಲಿ ಯಿರುವ ಲಾಡರ ಜಾತಿ ರಾಜೋಜಪ್ಪನ ಮಗ ಲಚ್ಚಣ್ಣ	ಮೈಸೂರು ಲಷ್ಕರ್ ಮೊಹಲೆಲಿರುವ ಲಾಡರ ಜಾತಿ ರಾಜೊಜಪ್ಪನ ಮಗ ದೇವೊಜಪ್ಪ	12—2—87	14—2—87	ಮೈಸೂರು ಮಂಡಿಮಹಲೆಲಿರುವ ಸಾದಾ ಹೆಂಚಿನ ಮನೆಯ (50) ರೂಪಾಯಿ ಕ್ರಯ ಪತ್ರ

ಸಬ್ ರಿಜಿಸ್ಟ್ರೀ ಆಫಿಸ್ ಹೆಸರು.	ಇಸವಿ ನಂಬರ್.	ಬರದುಕೊಟ್ಟವನ ಹೆಸರು ಮತ್ತು ಅಡಿಷ್ಟ್.	ಬರಸಿಕೊಂಡವನ ಹೆಸರು ಮತ್ತು ಅಡಿಷ್ಟ್.	ರಿಜಿಸ್ಟ್ರೇಗೆ ಸೂಪರಾದ ಸಾಲಮಾಪ ತಾರೀಖು.	ರಿಜಿಸ್ಟರಾದ ಸಾಕೆನ್ಮೊ ಕೆ ತಾರೀಖು.	ದಸ್ತಾವೇಜಿನ ಸ್ವಭಾವ.
ಮೈಸೂರು ಸಬ್ ರಿಜಿಸ್ಟ್ರೀ ಆಫಿಸ್	ಬುಕ್ಕು ನಂ. 1 ನಂಬರ್ 859 86—87ನೇ ಇಸವಿ	ಮೈಸೂರು ಕೃಷ್ಣರಾಜ ಮಹಲೆ ಸುಂಣದಕೆರೆಲಿರುವ ಕುಂಬಾರ ಜಾತಿ ಹೊನ್ನಯ್ಯನ ಮಕ್ಕಳು ಚಿಕ್ಕರಾಮಣ್ಣ, ನಾರಾಯಣಪ್ಪ	ಮೈಸೂರು ಹೊಸ ಅಗ್ರಹಾರದಲ್ಲಿರುವ ಕುಂಚಿಗರ ಜಾತಿ ಗಂಜಾಂ ದೊಡ್ಡಮಲ್ಲಯ್ಯನ ಮಗ ಕರಿಯಂಣ	3—3—87	1—3—87	ಮೈಸೂರು ಕೃಷ್ಣರಾಜ ಮಹಲೆಲಿರುವ ಹೆಂಚಿನ ಮನೆಯ 250 ರೂಪಾಯಿ ಆಧಾರ ಪತ್ರ
ಡಿಟೋ	ಬುಕ್ಕು ನಂ. 1 ನಂಬರ 389 87—88ನೇ ಇಸವಿ	ಮೈಸೂರು ತಾಲ್ಲೂಕು ವರಕೋಡು ಗ್ರಾಮದ ದಾಖಲೆ ಬಡಗಲ ಹುಂಡಿಲಿರುವ ದೊಡ್ಡಕುನ್ನೇಗೌಡನ ಮಗ ತಂಬಡಿ	ಮೈಸೂರು ತಾಲ್ಲೂಕು ವರಕೋಡು ಗ್ರಾಮದಾಖಲೆ ಬಡಗಲುಹುಂಡಿಲಿರುವ ದೊಡ್ಡಕುನ್ನೆಗೌಡನ ಮಗ ದೊಡ್ಡಯ್ಯ	26—8—87	27—8—87	ವರಕೋಡು ಗ್ರಾಮದ ಜಮೀನುಗಳ ಕ್ರಯಪತ್ರ ಮೊಬಲಗು (50) ರೂಪಾಯಿ
ಡಿಟೋ	ಬುಕ್ಕು ನಂ.1 ನಂಬರ್ 428 87—88ನೇ ಇಸವಿ	ಮೈಸೂರು ಹಳ್ಳೀ ಅಗ್ರಹಾರದಲ್ಲಿ ಯಿರುವ ಗೊಲ್ಲರ ಜಾತಿ ಈರಯ್ಯನ ಮಗ ಈರಯ್ಯ ಉರಫ್ ಬಿಲ್ಲಯ್ಯ	ಮೈಸೂರು ಹಳ್ಳೀ ಅಗ್ರಹಾರದಲ್ಲಿ ಯಿರುವ ಗೊಲ್ಲರ ಜಾತಿ ವಳಬಾಗಿಲು ಕಿದ್ದಂಣನ ಮಗಳು ಗೌರಮ್ಮ	12—9—87	24—9—87	ಮೈಸೂರು ಕೃಷ್ಣರಾಜ ಮಹಲೆಲಿ ಯಿರುವ ಯರಡು ಅಂಕಣ ಹೆಂಚಿನ ಮನೆ ಯಿದಕ್ಕೆ ಕೇರಿದ ಖಾಲಿಜಾಗ ಸಹ (42) ರೂಪಾಯಿ ಕ್ರಯ
ಡಿಟೋ	ಬುಕ್ಕು ನಂ. 1 ನಂಬರ್ 512 87—88ನೇ ಇಸವಿ	ಮೈಸೂರು ಕೃಷ್ಣರಾಜ ಮಹಲೆಲಿರುವ ಕಂಚುಗಾರ ಜಾತಿ ಚಿಣ್ಣಯ್ಯನಮಗ ಕಾಮಾಕ್ಷಯ್ಯ	ಮೈಸೂರು ಕೃಷ್ಣರಾಜ ಮಹಲೆಲಿರುವ ಕಂಚುಗಾರ ಜಾತಿ ಕರಿಪೆಯ್ಯನ ಮಗ ಕರಿಪೆಯ್ಯ	12—10—87	21—10—87	ಮೈಸೂರು ಕೃಷ್ಣರಾಜ ಮಹಲೆ ಸುಂಣದಕೆರೆಲಿರುವ ಮನೆ ಜಾಗಾ ಸಹ (25) ರೂಪಾಯಿಗೆ ಆಧಾರ ಮಾಡಿರುವದಾಗಿ
ಗುಂಡ್ಲು ಸಬ್ ರಿಜಿಸ್ಟ್ರೀ ಆಫಿಸ್	ಬುಕ್ಕು ನಂ.1 ನಂಬರ್ 64 87—88ನೇ ಇಸವಿ	ಚಾಮರಾಜನಗರ ತಾಲ್ಲೂಕು ಕೆಬ್ಬೆಪುರದಲ್ಲಿ ಯಿರುವ ಶಿವಾಚಾರದ ಕುರುಡ ಲಿಂಗೇಗೌಡನ ಮಗ 45 ವರುಷದ ತಪಳಯ್ಯ	ಚಾಮರಾಜ ನಗರ ತಾಲ್ಲೂಕು ಕೆಬ್ಬೆಪುರದಲ್ಲಿರುವ ಶಿವಾಚಾರದ ಕುರಡಲಿಂಗೆಗೌಡನ ಮಗ ಚಿರಾಯಿತು ಕಸಬಿನ 50 ವರುಷದ ಕಾಳೇ ಗೌಡ	23—8—87	23—8—87	ಕೊರವಳ್ಳಿ ಗ್ರಾಮದ 3ನೇ ನಂಬರ್ ಜಮೀನು (95) ರೂಪಾಯಿಗೆ ಕ್ರಯ
ನಂಜನಗೂಡು ಸಬ್ ರಿಜಿಸ್ಟ್ರೀ ಆಫಿಸ್	ಬುಕ್ಕು ನಂ.1 ನಂಬರ್ 198 86—87ನೇ ಇಸವಿ	ನಂಜನಗೂಡು ತಾಲ್ಲೂಕು ತಗಡೂರುನಲ್ಲಿ ಯಿರುವ ಕಾರ್ಯದ ಶಾನುಭೋಗ ವೀರರಾಘವಯ್ಯ	ನಂಜನಗೂಡು ತಾಲ್ಲೂಕು ಕಾರ್ಯದ ಗ್ರಾಮದಲ್ಲಿ ಯಿರುವ ಶಿವಾಚಾರದ ಕಾಳಮಾದೆಗೌಡನ ಮಗ ವಳಲೆ ಕಾಳ ಮಾದಯ್ಯ	29—7—86	29—7—86	(99) ರೂಪಾಯಿನ ಆಧಾರಪತ್ರ
ಡಿಟೋ	ಬುಕ್ಕು ನಂ. 1 ನಂಬರ 272 1887—88	ನಂಜನಗೂಡುನಲ್ಲಿ ಇರುವ ಅಮ್ಮನವರ ಗುಡಿ ವಾಸುದೇವ ದೀಕ್ಷಿತರ ನಂಜುಂಡ ದೀಕ್ಷಿತರ ಮಗ ಶ್ರೀಕಂಠದೀಕ್ಷಿತ	ನಂಜನಗೂಡುನಲ್ಲಿ ಇರುವ ಕರೋಹಟ್ಟಿ ಕಿದ್ದಪ್ಪ	20—9—87	20—9—87	(27) ರೂಪಾಯಿನಕ್ರಯಪತ್ರ
ಡಿಟೋ	ಬುಕ್ಕು ನಂ. 1 ನಂಬರ್ 425 1887—88	ನಂಜನಗೂಡು ತಾಲ್ಲೂಕು ಕಳಲೇಯಲ್ಲಿರುವ ಮೂಜಿ ಕಿಲ್ಲೇದಾರ ಲಿಂಗನಾಯಕನ ಮಗ ಲಿಂಗಪ್ಪ ಉರಫ್ ಮರಿದೇವರು	ನಂಜನಗೂಡು ತಾಲ್ಲೂಕು ಕಳಲೇಯಲ್ಲಿ ಇರುವ ಕಾಂತಪ್ಪನವರ ಮಕ್ಕಳು ಅನಂತಯ್ಯ	15—12—87	15—12—87	(75) ರೂಪಾಯಿನ ಕ್ರಯಪತ್ರ

ಸಬ್ ರಿಜಿಸ್ಟ್ರರ್ ಆಫಿಸ್ ಹೆಸರು.	ಇಸವಿ ನಂಬರ್.	ಬರದುಕೊಟ್ಟವನ ಹೆಸರು ಮತ್ತು ಅಡಿಪರ್ಷ.	ಬರಸಿಕೊಂಡವನ ಹೆಸರು ಮತ್ತು ಅಡಿಪರ್ಷ.	ರಿಜಿಸ್ಟ್ರರಿಗೆ ಹಾಜರಾದ ಸಾಲ್ನಾಮೆ ತಾರೀಖು.	ರಿಜಿಸ್ಟ್ರರು ಸಾಲ್ನಾಮೆ ತಾರೀಖು.	ದಸ್ತಾವೇಜಿನ ಸ್ವಭಾವ.
ನಂಜನಗೂಡು ಸಬ್ ರಿಜಿಸ್ಟ್ರರ್ ಆಫಿಸ್	ಬುಕ್ಕು ನಂ. 1 ನಂಬರ್ 405 1887—88	ನಂಜನಗೂಡು ತಾಲ್ಲೂಕು ಸಿಂಧವಳ್ಳಿಲಿರುವ ಶಿವಾಚಾರದ ಜೀರಮ್ಮನ ಸುಬ್ಬೇಗವ್ವಡನ ಹೆಂಡತಿಣನ ಸುಬ್ಬಮ್ಮ	ಮೈಸೂರು ಹೊಸಅಗ್ರಹಾರದಲ್ಲಿ ಯಿರುವ ಕುಂಚಿಗರ ನಾಗೋಜಂ ಮಗ ನಾಗಂಣ	7—12—86	8—12—86	(100) ರೂಪಾಯಿನ ಕ್ರಯ ಪತ್ರ

ಜೆ. ಜೆ. ಮೈಕಲ್‌ಜಾರ್,
ರಿಜಿಸ್ಟ್ರಾರ್.

ನೋಟಸ್.

1878ನೇ ಇಸವಿ ಫಾರೆಸ್ಟ್ ರೂಲ್ಸ್ 36 ಮತ್ತು 37ನೇ ಸೆಕ್ಷರ್ಷಗಳಿಗನುಗುಣವಾಗಿ ಇದರಿಂದ ಸಮಸ್ತರಿಗೂ ತಿಳಿಯಪಡಿಸುವ ದೇನಂದರೆ ಕಪಿಲಾನದಿ ಪ್ರವಾಹದಲ್ಲಿ ತೇಲಿಕ್ಕೊಂಡು ಬಂದು ದಡದಲ್ಲಿ ಬಿದ್ದಿದ್ದು ಈಗ ನಂಜಿನಗೂಡು ರೆಸಿರ್ಡೆಸಿ ಬಂಗಲಾವಿನ ಹೊರಭಾಗದಲ್ಲಿ ಇರುವ ತೇಗಿನ ನಾಟಾವಿನ ಸ್ವತ್ವಕ ದರೋಬಸ್ತು ಹಕ್ಕುದಾರಿಗಳು ಡೆಪ್ಯುಟಿ ಕಮ್ಮಿಷನರಿ ಯಾ ಅವರು ಅಧಿಕಾರ ಕೊಡುವಂಥಾ ಇತರ ಆಫೀಸರವರಿಂದ ವ್ಯವಸ್ತೆ ಮಾಡಲ್ಪಡುವವು.

ಈ ತೇಲಿಕ್ಕೊಂಡು ಬಂದ ಮತ್ತು ಜೇವಾರ್ಸು ಬಾಬತು ನಾಟಾವಿನ ವಿಷಯದ ಸ್ವತ್ವದ ದರೋಬಸ್ತು ಹಕ್ಕುದಾರಿಗಳು ಈ ನೋಟಿಸ್ ಫಾಯಿಷ್ ಅದ ತಾರೀಖು ಲಾಗಾಯತು ಯರಡು ತಿಂಗಳೊಳಗಾಗಿ ಬಾಧ್ಯತೆ ತರತಕ್ಕದ್ದು. ಆ ತರುವಾಯ ಅಂಥಾ ಸ್ವತ್ವಕ್ಕೆ ಬಾಧ್ಯತೆ ಅಂಗೀಕರಿಸಲ್ಪಡಲಾರದು ಮತ್ತು ಸದರೀ ನಾಟಾವಿಗೆ ಯಾವ ಮನುಷ್ಯನಾಗಲಿ ಬಾಧ್ಯತೆಯನ್ನು ಸ್ಥಿರಪಡಿಸದಿದ್ದರೆ ಐರ್ಜ ನಾಟಾವು ಗವರ್ಮೆಂಟಿಗಾಗಿ ವಿಕ್ರಯಿಸಲ್ಪಡುವದು.

ಜೆ. ಜೆ. ಮೈಕಲ್‌ಜಾರ್,
ಡೆಪ್ಯುಟಿ ಕಮ್ಮಿಷನರ್.

ಹಾಸನ ಡಿಸ್ಟ್ರಿಕ್ಟು.
ನೊಟಿಫಿಕೇಷರ್ನ.

10ನೇ ಡಿಸಂಬರ್ 1889ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸರ್ಕಾರದವರ ಅಪ್ಪಣೆ ಅನುಸರಿಸಿ ಹಾಸನ ಡಿಸ್ಟ್ರಿಕ್ಟು ಬಾಬತು ಅನುಪಯೋಗವಾದ ರೆವಿನ್ಯೂ ರಿಕಾರ್ಡುಗಳು ನಾಶ ಪಡಿಸಲ್ಪಡುವವು.

ದಸ್ತ್ರಾವಜುಗಳು ದಾಖಲಾತುಗಳು ವಗ್ಯೆರೆ ಪಡಿಯಲೂ ಅಪೇಕ್ಷೆವುಳ್ಳ ಕಕ್ಷಿಗಾರ್ರು ಈ ತಾರೀಖು ಲಾಗಾಯತು ಮೂರು ತಿಂಗಳ ವಳಗಾಗಿ ನಮ್ಮನ್ನ ಕೇಳಿ ಕೊಳ್ಳಬಹುದು.

4ನೇ ಜನವರೀ 1890ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—

ಸರ್ಕಾರದ ಅಪ್ಪಣೆ ಅನುಸರಿಸಿ ಕೆಳಗೆ ನಮೂದು ಮಾಡುವ ಈ ಡಿಸ್ಟ್ರಿಕ್ಟುಗಳ ಅನುಪಯೋಗವಾದ ರೆವಿನ್ಯೂ ರಿಕಾರ್ಡುಗಳು ನಾಶಪಡಿಸಲ್ಪಡುವವು.

ದಸ್ತ್ರಾವಜುಗಳು ದಾಖಲಾತುಗಳು ವಗ್ಯೆರೆ ಪಡಿಯಲು ಅಪೇಕ್ಷೆವುಳ್ಳ ಕಕ್ಷಿಗಾರ್ರು ಈ ತಾರೀಖುಲಾಗಾಯಿತು 3 ತಿಂಗಳ ವೊಳಗಾಗಿ ಆಯಾಯ ತಾಲ್ಲೂಕು ಅಮಲ್ದಾರ್‌ಗಳಲ್ಲಿ ಕೇಳಿಕೊಳ್ಳಬಹುದು.

1 ಹಾಸನ
2 ಮಂಜ್ರಾಬಾದು
3 ಹೊಳೇನರಸೀಪುರ
4 ಬೇಲೂರು
5 ಅರಸೀಕೆರೆ
6 ಅರಕಲ್‌ಗೂಡು
7 ಚನ್ನರಾಯಪಟ್ಟಣ

ಪಿ. ಆರ್. ಪೂರ್ಣಯ್ಯ,
ಡೆಪ್ಯೂಟಿ ಕಮ್ಮಿಷನರ್.